ಹೋದಳು. ಬಟ್ಟೆ ಬದಲಿಸಿ, ಮತ್ತೆ ಪ್ಯಾಡ್‌ಗೀಡ್ ಎಂದು ಸುಭದ್ರಪಡಿಸಿಕೊಂಡು ಮಂಚದ ಮೇಲೆ ಉರುಳಿದಳು.

'ಏಳು... ಟೀ ಮಾಡಿದೀನಿ, ಕುಡಿ ಬಾ' ರಮೇಶ ಮೆತ್ತಗಾಗಿದ್ದ.

'ಸೈಕಲ್ ಚೆನ್ನಾಗಿದೆ. ಮಹಾಕಳ್ಳಿ ನೀನು' ಎಂದು ವಾರದ ನಂತರ ರಮೇಶ ಒಮ್ಮೆ ತಲೆ ಮೇಲೆ ಮೊಟಕಿದ್ದ.

'ಆಹಾಹಾ. ನೀನೇನು ಮಹಾ ಸುಭಗ! ರಂಗಶಂಕರದಲ್ಲಿ ನಾಟಕ ನೋಡೋದಲ್ಲದೇ, ಇಲ್ಲೂ ನಾಟಕ ಮಾಡಬೇಡ' ವಿನುತಾ ರೇಗಿದಳು. ಆ ದಿನ ಅಂಥ ಹೊಟ್ಟೆನೋವಿನಲ್ಲಿಯೂ ಸೈಕಲ್ ಬ್ಯಾಲೆನ್ಸ್ ತಪ್ಪದಂತೆ ಪೆಡಲ್ ತುಳಿಯುತ್ತಿದ್ದ ಕಾಲುಗಳು, ಹ್ಯಾಂಡಲ್ ಮೇಲಿನ ಕೈಗಳು, ತಿಳಿಗಾಳಿಯನ್ನು ಆಸ್ವಾದಿಸುವಂತೆ ಗಾಳಿಗೊಡ್ಡಿದ ಮುಖ, ಇಡೀ ದೇಹವೇ ಸೊಬಗಿನ ಲಾಸ್ಯದಲ್ಲಿ ಎಳೆಬಿಸಿಲಿನಲ್ಲಿ ತೂಗುತ್ತಿರುವಂತೆ ಕಂಡ ವಿನೀ. ಇಲ್ಲಿ ಅಡುಗೆಮನೆಯಲ್ಲಿ, ಬಚ್ಚಲುಮನೆ ತೊಳೆಯುವಲ್ಲಿ, ಗಿಡಕ್ಕೆ ನೀರು ಚಿಮುಕಿಸುವಲ್ಲಿ, ಚಿಕ್ಕಪುಟ್ಟದಕ್ಕೂ ಕಿರಿಕಿರಿ ಮಾಡಿಕೊಂಡು ರೇಗುವ ಕ್ಷಣದಲ್ಲಿ ಕಂಡ ವಿನೀಗಿಂತ ಪೂರ್ಣ ಬೇರೆಯಾಗಿದ್ದಳು. ರಮೇಶನಿಗೆ ಸೈಕಲ್ ಸವಾರಿಯ ವಿನೀಯ ಚಿತ್ರ ಕಣ್ಣ ಮುಂದೆ ತೂಗಿದಂತೆ ಮಾತೇ ಆಡದೇ ತೆಪ್ಪಗಾಗಿದ್ದ. ಅಲ್ಲಿಗೆ ಸಮಾ ಜಗಳವಾಡುವ ವಿನುತಾಳ ಹುಕಿಯೂ ಮರೆಯಾಯಿತು. ಯುದ್ಧದ ಇರಾದೆಯೇ ಇಲ್ಲದವನಿಗಾಗಿ ತಾನು ಎಷ್ಟೆಲ್ಲ ಶಸ್ತ್ರಗಳನ್ನು ಸಜ್ಜು ಮಾಡಿಕೊಂಡಿದ್ದೆನಲ್ಲ ಎಂದು ವಿನುತಾಳಿಗೆ ನಗು ಬಂದಿತ್ತು. 'ಹೊರಗಿನವರಲ್ಲ, ಕೆಲವು ಸಲ ನಮ್ಮ ದೇಹವೇ ನಮ್ಮ ವೈರಿಯೇನೋ ಅನ್ನೋ ಹಂಗೆ ವರ್ತಿಸುತ್ತೆ' ಎಂದುಕೊಳ್ಳುತ್ತ ವಿನುತಾ ಎಲ್ಲ ಹ್ಯಾಂಡ್‌ಬ್ಯಾಗುಗಳಲ್ಲಿಯೂ ಹೊಟ್ಟೆನೋವಿನ ಮಾತ್ರೆ ಮತ್ತು ನ್ಯಾಪ್‌ಕಿನ್ ಇಟ್ಟುಕೊಂಡಳು.

ರಂಗಶಂಕರದಲ್ಲಿ ರಾಜೋ ಮತ್ತೆ ಒಂದೆರಡು ನಾಟಕದಲ್ಲಿ ನಟಿಸಿದ್ದಳು. ಅವಳ ನಾಟಕವಿದ್ದಾಗ ಮಾತ್ರ ವಿನುತಾ, ಮೇಗಲೆ ತಪ್ಪಿಸದೇ ರಂಗಶಂಕರಕ್ಕೆ ಹಾಜರಿ ಹಾಕಿದರು. ನಾಟಕ ಮುಗಿದ ಮೇಲೆ ಅವಳಿಗಾಗಿ ಕಾದು ನಿಂತು, ಐದು ನಿಮಿಷವಾದರೂ ಹರಟೆ ಹೊಡೆದು, ನಕ್ಕರು. ನಾಟಕ ಶುರುವಾಗುವುದಕ್ಕಿಂತ ಮೊದಲು, ಮುಗಿದ ಮೇಲೆ ಅಷ್ಟೆಲ್ಲ ಜನರ ತಲೆ, ಬೆನ್ನುಗಳ ನಡುವೆ ರಮೇಶನ ತಲೆ, ಬೆನ್ನನ್ನು ಗುರುತಿಸಿ, ವಿನುತಾ ತನ್ನೊಳಗೆ ನಗುತ್ತಿದ್ದಳು. ಒಮ್ಮೆಯೂ ಅವನು ಬಂದಿದ್ದಾನೆ ಎಂಬುದನ್ನು ಅವರಿಬ್ಬರ ಮುಂದೆ ಹೇಳಲಿಲ್ಲ. ಅವನೂ ಇವಳನ್ನು ಅಲ್ಲಿ ಮಾತಾಡಿಸಲಿಲ್ಲ ಅಥವಾ ಇಬ್ಬರೂ ಜೊತೆಯಾಗಿ ಹೋಗಣ ಎನ್ನಲಿಲ್ಲ. ಇಬ್ಬರೂ ಪರಸ್ಪರರ ಒಳಲೋಕದ ಖಾಸಗೀತನವನ್ನು ಕದಡದೇ ಇರುವ ಅದೇನೋ ಒಂದು ಅಲಿಖಿತ ಒಪ್ಪಂದವಾದಂತೆ ಇದ್ದರು. ಇದು ಜಗಳ, ಮುನಿಸು, ಕಿರಿಕಿರಿ ಯಾವುದೂ ಅಲ್ಲದ ಬೇರೆಯದೇ ಆದ ಭಾವನೆ ಎಂಬುದು ಅರಿವಿಗೆ ದಕ್ಕುತ್ತಿರುವಂತೆ ಒಂದು ಬಗೆಯ ನಿರಾಳತೆ ವಿನುತಾಳನ್ನು ಆವರಿಸಿತು.

* * *

'ಇಬ್ಬರೂ ಇವತ್ತು ಸಂಜೆ ನಮ್ಮನೆಗೆ ಬನ್ನಿ. ಸುಮ್ನೆ ಒಟ್ಟು ಸೇರಣ. ನಮ್ಮನೇಲೆ ಉಳಿಯಬಹುದು. ಸುಮಾರು ದಿನವಾಯಿತು' ರಾಜೋ ಆ ಶುಕ್ರವಾರ ಬೆಳಗ್ಗೆ ತಮ್ಮ ಮೂವರ ಥ್ರೀ ಏಜ್‌ಲೆಸ್ ಗರ್ಲ್ಸ್ ಗುಂಪಿನಲ್ಲಿ ಮೆಸೇಜಿಸಿದ್ದಳು. ಮಧ್ಯಾಹ್ನ ಊಟದ ಸಮಯದಲ್ಲಿಯೂ ವಿನುತಾಳಿಗೆ ಸೇರಣ ಎಂದಳೇ ಹೊರತು, ಕೇಳಿದರೂ ಕಾರಣವನ್ನು ಬಾಯಿಬಿಡಲಿಲ್ಲ. 'ಏನು ಗುಟ್ಟು ಮಾಡ್ತೀಯಪ್ಪ' ಎಂದು ವಿನುತಾ ರೇಗಿದಳು.

'ಸೇರೋದೆ ಇದ್ದರೆ ನಮ್ಮನೇಲೆ ಸೇರಣ. ಉಳಿಯೋದಕ್ಕೆ ನಮ್ಮನೆ ಒಳ್ಳೇದು. ಮೂರು ಕಾಟ್ ಇವೆ!' ಮೇಗಲೆ ನಗುಮೊಗದ ಇಮೋಜಿಯೊಂದಿಗೆ ಉತ್ತರಿಸಿದ್ದಳು. ಅಪರೂಪಕ್ಕೆ ರಾಜೋ ಏನೂ ತಕರಾರೇ ಎತ್ತದೇ, 'ಆಯ್ತು... ಆದರೆ ಪಾರ್ಟಿ ನನ್ನ ಕಡೆಯಿಂದ' ಎಂದಿದ್ದಳು.

ವಿನುತಾ, ರಾಜೋ ತಮ್ಮ ಆಫೀಸಿನಿಂದ ಮೇಗಲೆ ಮನೆಗೆ ಹೋಗೋದು, ಊಟ ಮಾಡಿ, ಅಲ್ಲೇ ಉಳಿಯೋದು ಎಂಬ ನಿರ್ಧಾರವೂ ಆಯಿತು. ಮೇಗಲೆಯ ಮನೆಯಲ್ಲಿ ರಾಜೋ ಪಾರ್ಟಿ ಇವತ್ತು, ಅಲ್ಲೇ ಉಳಿದು ನಾಳೆ ಬರ್ತೀನಿ ಎಂದು ರಮೇಶನಿಗೆ ಚುಟುಕಾಗಿ ವಿನುತಾ ಮೆಸೇಜಿಸಿದಳು.

ರಾಜೋ ಉಲ್ಲಾಸದ ಲಹರಿಯಲ್ಲಿದ್ದಳು.

ಮೇಗಲೆಯ ಮನೆ ತಲುಪಿದ್ದೇ ರಾಜೋ, 'ಊಟಕ್ಕೆ ಏನೂ ಮಾಡಬೇಡ ಮೇಗಲೆ. ಏನಾದ್ರೂ ಆರ್ಡರ್ ಮಾಡಣ. ಒಂದು ದಿನ ತೊಳೆ, ಬಳಿ, ಹೆಚ್ಚು, ಒಗ್ಗರಣೆ,